# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ).

ನಿಗಮ ಕಾರ್ಯಾಲಯ,
CIN : U40109KA2004SGC035177
ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-17.
Website : www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ಜ್ಯೋತಿನಗರ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ : 0821-2450020

ಕ್ರ.ಸಂ. : ಸ.ಕಾ.ನಿ.ಇಂ.(ವಿ)/ಜ್ಯೋತಿನಗರ/17-18/ 1733 ದಿನಾಂಕ : 19-06-2017

## ಜನಸಂಪರ್ಕ ಸಭಾ ನಡಾವಳಿ

ದಿನಾಂಕ 12-06-2017 ರಂದು ಮಧ್ಯಾಹ್ನ 3.00 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ಶ್ರೀ ನರಸಿಂಹೇಗೌಡ, ಅಧಿಕ್ಷಕ ಇಂಜಿನಿಯರ್ (ವಿ), ಸೆಸ್ಕ್, ಮೈಸೂರುರವರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಸಲಾಗಿರುತ್ತದೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ಗ್ರಾಹಕರ ಪ್ರತಿನಿಧಿಗಳ ವಿವರ :**

| ಕ.ಸಂ. | ಅಧಿಕಾರಿ/ನೌಕರರ ಹೆಸರು | ಪದನಾಮ | ಉಪ ವಿಭಾಗ/ ಶಾಖೆಯ ಹೆಸರು |
|---|---|---|---|
| 1 | ಸೋಮಶೇಖರ್. ಎಂ.ಕೆ | ಕಾ.ನಿ.ಇಂ(ವಿ) | ಎನ್.ಆರ್.ಮೊಹಲ್ಲಾ ವಿಭಾಗ |
| 2 | ನಂದೀಶ್. ಎಂ.ಎಸ್ | ಸ.ಕಾ.ನಿ.ಇಂ(ವಿ), | ಜ್ಯೋತಿನಗರ ಉಪ ವಿಭಾಗ |
| 3 | ಯಾಲಕ್ಕಯ್ಯ | ಸ.ಲೆ.ಅ | ಜ್ಯೋತಿನಗರ ಉಪ ವಿಭಾಗ |
| 4 | ಎನ್. ಸೋಮಶೇಖರ್ | ಸ.ಇಂ(ವಿ), | ಜ್ಯೋತಿನಗರ ಶಾಖೆ |
| 5 | ಆರ್.ಶ್ರೀ ಹರ್ಷ | ಕಿ.ಇಂ(ವಿ), | ಜ್ಯೋತಿನಗರ ಶಾಖೆ |
| 6 | ಸ್ವಾಮಿ.ಸಿ | ಸ.ಇಂ(ವಿ), | ಉದಯಗಿರಿ ಶಾಖೆ |
| 7 | ತಿಮ್ಮರಾಜು. ಕೆ.ಟಿ | ಕಿ.ಇಂ(ವಿ), | ಉದಯಗಿರಿ ಶಾಖೆ |
| 8 | ಉಮೇಶ.ಜಿ | ಕಿ.ಇಂ(ವಿ), | ಶಾಂತಿನಗರ ಶಾಖೆ |
| 9 | ಮೊಹಮದ್ ಮುಜಾಹಿದ್, | - | ಗ್ರಾಹಕರು |
| 10 | ಶ್ರೀಮತಿ ಪಪಿಲಾ, | - | ಗ್ರಾಹಕರು |
| 11 | ನಾಸಿರ್ ಅಹಮ್ಮದ್, | - | ಗ್ರಾಹಕರು |
| 12 | ಅರವಿಂದ್ | - | ಗ್ರಾಹಕರು |
| 13 | ಆರ್.ಮಹದೇವ್ | - | ಗ್ರಾಹಕರು |
| 14 | ವಾಹೀದ್ ಉಲ್ಲಾ ಖಾನ್ | - | ಗ್ರಾಹಕರು |

ಸಭೆಯಲ್ಲಿ ಚರ್ಚಿಸಿದ ವಿಷಯಗಳು ಈ ಕೆಳಕಂಡಂತಿರುತ್ತದೆ.

ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರು ಜನಸಂಪರ್ಕ ಸಭೆಗೆ ಎಲ್ಲಾರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಸಭೆಗೆ ಆಗಮಿಸಿದ ಗ್ರಾಹಕ ಪ್ರತಿನಿಧಿರವರುಗಳ ಮನವಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

**ಶ್ರೀ ಮಹದೇವ್, ನಂ 1585, ಸಾತಗಳ್ಳಿ ಬಡಾವಣೆ, ಮಾನಸಿನಗರ, ಮೈಸೂರುರವರ ಮನವಿ :**

1) ಮೂಡ ಬಡಾವಣೆಯಲ್ಲಿ ಈಗಾಗಲೇ ಹಲವಾರು ಮನೆಗಳಿದ್ದು, ಕೇವಲ 1 ಟ್ರಾನ್ಸ್ ಫಾರ್ಮರ್ ಮಾತ್ರ ಇರುತ್ತದೆ ಆದ್ದರಿಂದ ಟ್ರಾನ್ಫಾರ್ಮರ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.

   ಮೂಡಾ ಬಡಾವಣೆಯಾಗಿರುವುದರಿಂದ ಸಂಬಂಧಿಸಿದ ಮೂಡಾ ಕಛೇರಿಯ ಅಧಿಕಾರಿಯವರನ್ನು ಸಂಪರ್ಕಿಸಲು ತಿಳಿಸಿರುತ್ತಾರೆ.

2) ಮುಂಗಾರು ಮಳೆ ಪ್ರಾರಂಭಗೊಂಡಿರುವುದರಿಂದ ವಿದ್ಯುತ್ ಕಂಬಗಳ ಮೇಲೆ ಹಾದು ಹೋಗಿರುವ ಮರಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

   ವಿದ್ಯುತ್ ಕಂಬಗಳ ಮೇಲೆ ಹಾದುಹೋಗಿರುವ ಮರದ ಕೊಂಬೆಗಳನ್ನು ತೆಗೆಯುವಂತೆ ಸಂಬಂಧಿಸಿದ ಎಲ್ಲಾ ಶಾಖಾಧಿಕಾರಿಯವರುಗಳಿಗೆ ತಿಳಿಸಿರುತ್ತಾರೆ.

**ಶ್ರೀ ಅರವಿಂದ್, ನಂ 530, ಉದಯಗಿರಿ 2ನೇ ಹಂತ ಮೈಸೂರುರವರ ಮನವಿ :**

1) ಗಾಯಿತ್ರಿಪುರಂ ಹತ್ತಿರ ಕೆಲವಡೆ ಹೊಸ ಕಂಬಗಳನ್ನು ಹಾಕಿದ್ದು, ಹಳೆಯ ಕಂಬಗಳನ್ನು ತೆಗೆಯದೇ ಇರುವುದರಿಂದ ಅದಾಷ್ಟು ಬೇಗ ಹಳೆಯ ಕಂಬಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

   ಅಧೀಕ್ಷಕ ಇಂಜಿನಿಯರ್(ವಿ) ಮೈಸೂರುರವರು ಹಳೆಯ ಕಂಬಗಳನ್ನು ತೆಗೆಯಲು ಸಂಬಂಧಿಸಿದ ಎಲ್ಲಾ ಶಾಖಾಧಿಕಾರಿಯವರುಗಳಿಗೆ ತಿಳಿಸಿರುತ್ತಾರೆ.

2) ವಿದ್ಯುತ್ ಬಳಕೆಯ ಬಿಲ್ಲ್‌ನ ಮೊತ್ತವನ್ನು Instalment ಮೂಲಕ ಪಾವತಿಸಲು ಅನುಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

   ನಿಗಮದ ನಿಯಾಮಾನುಸಾರ ವಿದ್ಯುತ್ ಬಳಕೆಯ ಮೊತ್ತವನ್ನು ಕಂತಿನ ಮೂಲಕ ಪಾವತಿ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ.

3) ಮುಖ್ಯ ರಸ್ತೆಗಳಲ್ಲಿರುವ ಬೀದಿದೀಪಗಳು ಕೆಟ್ಟುಹೋಗಿದ್ದು, ದುರಸ್ಥಿ ಪಡಿಸಲು ಕೋರಿರುತ್ತಾರೆ.

   ಬೀದಿದೀಪ ಸ್ಥಾವರಗಳನ್ನು ಮೈಸೂರು ಮಹಾನಗರ ಪಾಲಿಕೆಯವರು ನಿರ್ವಹಿಸುತ್ತಿದ್ದು, ಸಂಬಂಧಿಸಿದ ಮಹಾನಗರ ಪಾಲಿಕೆ ಕಛೇರಿಯ ಅಧಿಕಾರಿಯವರನ್ನು ಸಂಪರ್ಕಿಸಲು ತಿಳಿಸಿರುತ್ತಾರೆ.

**ಶ್ರೀಮತಿ ಷಕೀಲಾ, ರಾಘವೇಂದ್ರ ಬಡಾವಣೆ, ಮೈಸೂರುರವರ ಮನವಿ :**

1) ವಿದ್ಯುತ್ ಬಳಕೆಯ ಬಿಲ್ಲ್‌ನ ಮೊತ್ತವನ್ನು Instalment ಮೂಲಕ ಪಾವತಿಸಲು ಅನುಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

   ನಿಗಮದ ನಿಯಾಮಾನುಸಾರ ವಿದ್ಯುತ್ ಬಳಕೆಯ ಮೊತ್ತವನ್ನು ಕಂತಿನ ಮೂಲಕ ಪಾವತಿ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸುಲ್ತಾನ್ ರಸ್ತೆಯ 13 ನೇ ಕ್ರಾಸ್ ನಲ್ಲಿ ಚರಂಡಿ ಒಳಗಡೆ ಹೋಗಿರುವ ಕಂಬವನ್ನು ಸ್ಥಳಾಂತರಿಸಬೇಕಾಗಿ ಕೋರಿರುತ್ತಾರೆ.

ಕಂಬಗಳನ್ನು ಸ್ಥಳಾಂತರಿಸಲು ಸಂಬಂಧಿಸಿದ ಶಾಖಾಧಿಕಾರಿಯವರುಗಳಿಗೆ ತಿಳಿಸಿರುತ್ತಾರೆ.

**ಶ್ರೀ ವಾಹೀದ್ ಖಾನ್, ಬೀಡಿಕಾಲೋನಿ, ಮೈಸೂರುರವರ ಮನವಿ :**

1) ಸೇವಾ ಕೇಂದ್ರದವರು ರಾತ್ರಿ 10:00 ಗಂಟೆಯ ನಂತರ ದೂರವಾಣಿ ಕರೆಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಉಪವಿಭಾಗದಲ್ಲಿ ಪ್ರಸ್ತುತ ಸೇವಾ ಕೇಂದ್ರದ 2 ಪಾಳಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ದಿನಗಳಲ್ಲಿ 3 ಪಾಳಿಗಳಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಗ್ರಾಹಕರು 1912 ಗೆ ಕರೆ ಮಾಡಲು ಅಧೀಕ್ಷಕ ಇಂಜಿನಿಯರ್(ವಿ), ಮೈಸೂರುರವರು ತಿಳಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ ವಿಭಾಗ,
ಜ್ಯೋತಿನಗರ ಮೈಸೂರು.

ಪ್ರತಿಯನ್ನು :

1. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನಿಯರ್(ವಿ), ಜ್ಯೋತಿನಗರ/ಶಾಂತಿನಗರ/ಉದಯಗಿರಿ
4. ಸಲೆಅ/ಕಡತ


ಸಂಪರ್ಕ ಸಭೆಗೆ ಸ್ವಾಗತ